ಅ) ರಾಜ್ಯದಲ್ಲಿ ಬಾಕಿ ಉಳಿದಿದ್ದ ಪೋಡಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಪರವಾನಗಿ ಭೂಮಾಪಕರನ್ನು ಎಂದಿನಿಂದ ನಿಯೋಜಿಸಲಾಯಿತು; ನಿಯೋಜಿಸಿದ ನಂತರ ಸ್ಥಗಿತ ಮಾಡಲು ಕಾರಣವೇನು;

ಆ) ಭೂಮಾಪಕರನ್ನು ನೇರನೇಮಕಾತಿ ಮಾಡಿಕೊಳ್ಳಲು ಸರ್ಕಾರ ಯೋಚಿಸಿದೆಯೇ ಹಾಗೂ ತಕ್ಷಣ ಖಾಯಂ ಮಾಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಬಾಕಿ ಉಳಿದಿರುವ ಪೋಡಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಪರವಾನಗಿ ಭೂಮಾಪಕರನ್ನು ನಿಯೋಜಿಸಲು ತಿದ್ದುಪಡಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಪರವಾನಗಿ ಭೂಮಾಪಕರ ಯೋಜನೆಯ ರೀತ್ಯಾ ರೈತರು ತಮ್ಮ ಜಮೀನುಗಳ ವಿಭಾಗದ ವಿಕ್ರಯದ ಮುನ್ನ ಪರವಾನಗಿ ಭೂಮಾಪಕರಿಂದ ವಿಭಾಗಕ್ಕೆ ಒಳಪಡುವ ಭೂಮಿಯ ಅಳತೆ ಮಾಡಿಸಿಕೊಳ್ಳಬಹುದಾಗಿದೆ. ಸದರಿ ಅಳತೆಯಿಂದ ತಯಾರಿಸಿದ ನಕ್ಷೆಯನ್ನು ಭೂಮಾಪನ ಇಲಾಖೆಯಿಂದ ಅನುಮೋದನೆ ಪಡೆದು ನಂತರ ನಕ್ಷೆ ಸಹಿತ ನೋಂದಣಿ ಮಾಡಿಸುವ ಕಾರ್ಯಕ್ರಮವಾಗಿರುತ್ತದೆ. ಈ ಯೋಜನೆಯು ದಿನಾಂಕ: 6-7-99 ರಿಂದ ಜಾರಿಗೆ ಬಂದಿರುತ್ತೆ. ದಿನಾಂಕ: 1-6-2002 ರಿಂದ ಪರವಾನಗಿ ಭೂಮಾಪಕರಿಗೆ ಲೈಸೆನ್ಸ್ ನೀಡಲಾಗಿದೆ. ಈ ಯೋಜನೆಯಲ್ಲಿ ಕೆಲವು ಸಾರ್ವಜನಿಕರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಸಮಯದಲ್ಲಿ ಭಾಗಶಃ ಜಮೀನು ನೋಂದಣಿಗೆ ನಕ್ಷೆ ಕಡ್ಡಾಯಗೊಳಿಸದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 185 ಮುನೋಮು 2001, ದಿನಾಂಕ: 20-8-2002ಕ್ಕೆ ತಡೆಯಾಜ್ಞೆ ತಂದಿರುತ್ತಾರೆ. ಈ ತಡೆಯಾಜ್ಞೆಯು ವಿಭಾಗ : ಪಾಲು ಪಾರಿಕತ್ತಿನಂತೆ ಅಳತೆಗೆ ಅನ್ವಯಿಸಿರುವುದಿಲ್ಲ.

ಆ) ಈ ಪರವಾನಗಿ ಭೂಮಾಪಕರನ್ನು ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕು "ಬಿ.ಸಿ." ಕಾವಲು ಜಮೀನಿನ ಅಳತೆ ಕಾರ್ಯ

72 (215) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ ಬಿ.ಸಿ. ಕಾವಲು ಜಮೀನಿನ ಅಳತೆ ಕಾರ್ಯವನ್ನು ಕೈಗೊಳ್ಳಲು ತೆಗೆದುಕೊಂಡಿರುವ ನಿಲುವೇನು?

ಆ) ಅನೇಕ ವರ್ಷಗಳಿಂದ ರೈತರು ಸರಿಯಾದ ವ್ಯವಸ್ಥೆ ಇಲ್ಲದೇ ಪರಿತಾಪ ಪಡುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಅಳತೆ ಕಾರ್ಯ ಪೂರ್ಣ ಮಾಡಿ ಸರಿಪಡಿಸಿಕೊಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ ಜಮೀನಿನಲ್ಲಿ ಹಲವಾರು ವಿವಾದ ಉಂಟಾಗಿದ್ದು ಅವುಗಳ ನಿವಾರಣೆ ಸಲುವಾಗಿ, ಈಗಾಗಲೇ ಬೆಂಗಳೂರು ವಿಭಾಗದ ಭೂದಾಖಲೆಗಳ ಜಂಟಿ ನಿರ್ದೇಶಕರು, ಭೂದಾಖಲೆಗಳ ಉಪ ನಿರ್ದೇಶಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಸಭೆಯನ್ನು ದಿನಾಂಕ: 30-10-2002 ರಂದು ಏರ್ಪಡಿಸಿ ಚರ್ಚಿಸಿ, ಭೂಮಾಪನ ಇಲಾಖೆಯ ನಿರ್ದೇಶಕರಿಗೆ ವರದಿ ನೀಡಿರುತ್ತಾರೆ. ಸದರಿ ವರದಿಯಂತೆ ತುರುವೇಕೆರೆ

ತಾಲ್ಲೂಕು ದಂಡಿನಶಿವರ ಹೋಬಳಿ ಬಿ.ಸಿ. ಕಾವಲುನಲ್ಲಿ ಕೆಲವು ಮಂಜೂರಾತಿಯಂತೆ ದುರಸ್ತಿ ಆಗಿರುತ್ತದೆ. ಸದರಿ ದುರಸ್ತಿ ಆದ ಪ್ರದೇಶದಲ್ಲಿ ಮಂಜೂರಾತಿ ಬಗ್ಗೆ ಹಕ್ಕಿನ ಬಗ್ಗೆ ಹಾಗೂ ಎಲ್ಲೆ ಬಗ್ಗೆ ಹಲವಾರು ಸಮಸ್ಯೆ ಉದ್ಭವವಾಗಿದ್ದು ಸದರೀ ಅಂಶಗಳಲ್ಲಿ ತಾಲ್ಲೂಕು ಭೂಮಾಪಕರುಗಳಿಂದ ನಿವಾರಣಗೆ ಸಾಧ್ಯವಿಲ್ಲವೆಂದು, ಈ ಕೆಲಸಕ್ಕೆ ವಿಶೇಷ ಕಾರ್ಯಪಡೆಯನ್ನು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ತಹಸೀಲ್ದಾರ್, ಭೂದಾಖಲೆಗಳ ಸಹಾಯಕ ನಿರ್ದೇಶಕರು ಒಳಗೊಂಡಂತೆ ಸಮಿತಿ ರಚಿಸುವುದು ಅಗತ್ಯವೆಂದು ತಿಳಿಸಿ ಸರ್ಕಾರಕ್ಕೆ ದಿ: 26-2-2003 ರಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಅದರಂತೆ ಸಮಿತಿ ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಂತರ ಅಳತೆ ಕಾರ್ಯದ ಬಗ್ಗೆ ಅಗತ್ಯ ಕ್ರಮ ಜರುಗಿಸಲಾಗುವುದು.

ಅ) ಬಂದಿದೆ.

ಇ) ಅಳತೆ ಕೆಲಸವನ್ನು ಅಧ್ಯತೆ ಮೇಲೆ ತೆಗೆದುಕೊಂಡು ನ್ಯೂನತೆಗಳನ್ನು ಸರಿಪಡಿಸಲಾಗುವುದು.

ಶ್ರೀರಾಮಲಿಂಗೇಶ್ವರ ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸುವುದು

73 (217) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೆಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ "ಸಾಸಲು" ಗ್ರಾಮದ "ಶ್ರೀ ರಾಮಲಿಂಗೇಶ್ವರ ಸ್ವಾಮಿ" ದೇವಸ್ಥಾನವನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಲು ಸರ್ಕಾರ ಯೋಚಿಸಿದೆಯೆ?

ಆ) ಈ ದೇವಸ್ಥಾನವು ಪುರಾತನ ಕಾಲದಿಂದಲೂ ಐತಿಹಾಸಿಕ ಸ್ಥಳವಾಗಿದ್ದು, ಸಾವಿರಾರು ಜನರು ಬಂದು ಹೋಗುತ್ತಿರುವುದರಿಂದ ಪ್ರವಾಸೋದ್ಯಮ ಇಲಾಖೆಗೆ ಸೇರಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ

74 (220) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿರುವ ರಸ್ತೆಗಳು ಎಷ್ಟು;

ಆ) ಈ ರಸ್ತೆಗಳ ರಿಪೇರಿಗಾಗಿ ಕಳೆದ ಮೂರು ವರ್ಷಗಳಿಂದ ಯಾವ ಯಾವ ಲೆಕ್ಕಶೀರ್ಷಿಕೆಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ದುರಸ್ತಿಯಲ್ಲಿರುವ ಅನೇಕ ರಸ್ತೆಗಳಿಗೆ 3054ರ ಆಡಿಯಲ್ಲಿ ಈ ವರ್ಷ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೆ?